## ಬಾ ಗುಲಾಮನ ಮಾಡಿಕೋ ನನ್ನ

ಧಣಿಗಳ ಪಾದಗಳಿಗೆ ಮುತ್ತನಿಟ್ಟು
ಸವೆದು ತುಟಿಗಳು ನನ್ನವು
ನಿನ್ನ ಚುಂಬಿಸುವಾಗಲೂ
ಗುಲಾಮಗಿರಿಯೇ ಒಸರುವುದು ನನ್ನ ತುಟಿಯಿಂದ

ಹೆಂಗಸಿನ ಗುಲಾಮನೆಂಬರು ಎಲ್ಲಾರು ನನ್ನ
ನಾನೇನು ಮಾಡಲಿ
ಎಲ್ಲರೂ ಒಡೆಯರಾಗಲೆಂದೇ
ಓಡಾಡುತಿರುವರು ದುಡಿವವರ ಬುರುಡೆಗಳ ಮೆಟ್ಟಿ
ನಿನ್ನ ಪುಣ್ಯ
ನಾನು ನಿನ್ನ ದಾಸನಾಗಲು ಪರಿತಪಿಸುತಿರುವೆ

ಒಂದು ಮಿಸುಕನೂ ಹೊರಡಿಸದೆ
ನಿನ್ನ ತಾಳಬಲ್ಲೆ
ಬಾ
ನಿನ್ನಿಚ್ಚೆಯಂತೆ ಇರಿದು ತರಿದು
ಬಯಲುಮಾಡಿಕೊಡು
ನನ್ನೊಳಗಿನ ಬಿಡುಗಡೆಯನು

ನನಗೆ ಅರಿವಾಗಿದೆ
ಕೇವಲ
ನೀನು ಮಾತ್ರ ಬಲ್ಲೆ
ಗುಲಾಮತನದಲೇ ಎಲ್ಲವ
ಮಣಿಸುವ ಆಯುಧವರಸೆ



## ತೆರಿಗೆ ಕಟ್ಟದ ನಾಗರಿಕ

ನನ್ನ ತಾತನ ಹೆಸರಿನಲ್ಲಿದ್ದ ತುಂಡು ಭೂಮಿ
ಈಗ ನನ್ನ ಅಪ್ಪನ ಕಾಲಕ್ಕೆ ಇಲ್ಲವಾಗಿದೆ

ಕೇವಲ ಬಡ್ಡಿಕಟ್ಟಲೆಂದೇ
ಬದುಕಿಡಿ ದುಡಿದ ತಾತನ ಸಾಲಪತ್ರ ಬ್ಯಾಂಕು
ಬಾಬ್ತಿನಲ್ಲಿವೆ
ಏಸು ಸರ್ಕಾರಗಳು ಮನ್ನಾ ಮಾಡಿದರೂ
ತೀರದ ದುಗ್ಗಾಣಿ ಸಾಲಕ್ಕಾಗಿ

ಕಾರಣ:
ಹಸಿದ ಹೆಬ್ಬಾವಿನ ಮರಿಗಳಂತಿದ್ದ
ನನ್ನ ತಾತನ ಮಕ್ಕಳು
ಕೇವಲ ಉತ್ತು ಬಿತ್ತು ಉಣುವುದರಲ್ಲೇ
ಮೆತ್ತಗಾದರು
ಸಾಲ ತೀರಿಸುವಲ್ಲೇ ಸವೆದುಹೋದರು

ಈಗ ಅರ್ಧ ಶತಮಾನ ಉರುಳಿದೆ...
ನಮ್ಮ ಹೊಲದ ಬದುವಿಗಂಟಿ
ರೈಲು ಹಳಿ ಬರುವ ಸುದ್ದಿ

'ನೀವು ಐವತ್ತಾರು ವರ್ಷದ ಅಬತಿ ಕಟ್ಟಿಲ್ಲ